ಪ್ರಜಾವಾಣಿ

# ಜೈನ್ ತಂಡಕ್ಕೆ ಗೆಲುವು

**ಪ್ರಜಾವಾಣಿ ವಾರ್ತೆ**

ಬೆಂಗಳೂರು: ಜೈನ್ ವಿಶ್ವವಿದ್ಯಾಲಯದ ತಂಡದವರು ಟೊಯೊಟೊ ಯೂನಿವರ್ಸಿಟಿ ಟ್ವೆಂಟಿ-20 ಕ್ರಿಕೆಟ್ ಚಾಂಪಿಯನ್‌ಷಿಪ್‌ನ ಎರಡನೇ ಲೀಗ್ ಪಂದ್ಯದಲ್ಲಿ ಗ್ವಾಲಿಯರ್‌ನ ಜಿವಾಜಿ ವಿ.ವಿ. ಎದುರು 29 ರನ್‌ಗಳ ಗೆಲುವು ಸಾಧಿಸಿದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಂಗಳವಾರ ರಾತ್ರಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಜೈನ್ ವಿ.ವಿ. 20 ಓವರ್‌ಗಳಲ್ಲಿ ಎಂಟು ವಿಕೆಟ್ ನಷ್ಟಕ್ಕೆ 171 ರನ್ ಗಳಿಸಿತು. ಈ ಗುರಿ ಮುಟ್ಟುವಲ್ಲಿ ಚಡಪಡಿಸಿದ ಜಿವಾಜಿ ತಂಡ ನಿಗದಿತ ಓವರ್‌ಗಳಲ್ಲಿ ಐದು ವಿಕೆಟ್ ಕಳೆದುಕೊಂಡು 132 ರನ್ ಗಳಿಸಿತು.

ಕೌನೈನ್ ಅಬ್ಬಾಸ್ ಕೇವಲ 48 ಎಸೆತಗಳಲ್ಲಿ ಒಂಬತ್ತು ಬೌಂಡರಿ ಹಾಗೂ ಮೂರು ಸಿಕ್ಸರ್ ಸೇರಿದಂತೆ 74 ರನ್ ಗಳಿಸಿದರು. ಶ್ರೇಯಸ್ ಗೋಪಾಲ್ 44 ರನ್ ಗಳಿಸಿದರು. ಈ ಇಬ್ಬರು ಬ್ಯಾಟ್ಸ್‌ಮನ್‌ಗಳ ಅಬ್ಬರದ ಆಟದ ನೆರವಿನಿಂದ ಜೈನ್ ವಿ..ವಿಗೆ ಸವಾಲಿನ ಮೊತ್ತ ಗಳಿಸಲು ಸಾಧ್ಯವಾಯಿತು.

ಇಂದು ಮೂರನೇ ಪಂದ್ಯ: ಜೈನ್ ವಿ.ವಿ. ಹಾಗೂ ನಾರ್ದರ್ನ್ ಸ್ಟಾಲಿನ್ಸ್ (ಅಲಿಘಡ ಮುಸ್ಲಿಂ ವಿ.ವಿ) ತಂಡಗಳ ನಡುವೆ ಗುರುವಾರ ರಾತ್ರಿ 7.30ಕ್ಕೆ ಪಂದ್ಯ ನಡೆಯಲಿದೆ.

ಹಿಂದಿನ ಎರಡೂ ಪಂದ್ಯಗಳಲ್ಲಿ ಗೆಲುವು ಪಡೆದಿರುವ ಜೈನ್ ವಿ.ವಿ. ಹ್ಯಾಟ್ರಿಕ್ ಜಯ ಪಡೆಯುವ ವಿಶ್ವಾಸ ಹೊಂದಿದೆ. ಈ ತಂಡ ಮೊದಲ ಲೀಗ್ ಪಂದ್ಯದಲ್ಲಿ ಈಸ್ಟರ್ನ್ ಈಗಲ್ಸ್ (ವೀರ್ ಬಹದ್ದೂರ್ ಸಿಂಗ್ ಪೂರ್ವಾಂಚಲ್ ವಿ.ವಿ.) ಎದುರು ಸುಲಭ ಜಯ ಪಡೆದಿತ್ತು.

ಸಂಕ್ಷಿಪ್ತ ಸ್ಕೋರು: ಜೈನ್ ವಿ.ವಿ. 20 ಓವರ್‌ಗಳಲ್ಲಿ 171ಕ್ಕೆ8. (ಕೌನೈನ್ ಅಬ್ಬಾಸ್ 74, ಶ್ರೇಯಸ್ ಗೋಪಾಲ್ 42; ಪ್ರಶಾಂತ್ ಮಾವಲ್ 31ಕ್ಕೆ3, ಹಿಮಾಂಶು ಬಾಬರ್ 46ಕ್ಕೆ2). ಜಿವಾಜಿ ವಿ.ವಿ. ಗ್ವಾಲಿಯರ್ 20 ಓವರ್‌ಗಳಲ್ಲಿ 5 ವಿಕೆಟ್‌ಗೆ 132. (ಎಸ್. ಸನತ್ 52; ಸಮರ್ಥ ರವಿಕುಮಾರ್ 16ಕ್ಕೆ2). ಫಲಿತಾಂಶ: ಜೈನ್ ವಿವಿಗೆ 29 ರನ್ ಜಯ.



ಜೈನ್ ವಿಶ್ವವಿದ್ಯಾಲಯ ತಂಡದ ಕೌನೈನ್ ಅಬ್ಬಾಸ್ ಅವರ ಬ್ಯಾಟಿಂಗ್ ವೈಖರಿ -ಪ್ರಜಾವಾಣಿ ಚಿತ್ರ